# UNIVERSITY OF MYSORE

**Postgraduate Entrance Examination August-2024**

| QUESTION PAPER BOOKLET NO. |
|---|
| |

| Entrance Reg. No. | | | | | | |
|---|---|---|---|---|---|---|
| | | | | | | |

**SUBJECT CODE : 1 7**

**QUESTION BOOKLET**

**(Read carefully the instructions given in the Question Booklet)**

**COURSE : M.Sc.** **SUBJECT : GEOGRAPHY**

**MAXIMUM MARKS : 50** **MAXIMUM TIME : 75 MINUTES**

**(Including time for filling O.M.R. Answer sheet)**

## INSTRUCTIONS TO THE CANDIDATES

1. The sealed question paper booklet containing 50 questions enclosed with O.M.R. Answer Sheet is given to you.
2. Verify whether the given question booklet is of the same subject which you have opted for examination.
3. Open the question paper seal carefully and take out the enclosed O.M.R. Answer Sheet outside the question booklet and fill up the general information in the O.M.R. Answer sheet. If you fail to fill up the details in the form as instructed, you will be personally responsible for consequences arising during evaluating your Answer Sheet.
4. During the examination:
   a) Read each question carefully.
   b) Determine the Most appropriate/correct answer from the four available choices given under each question.
   c) Completely darken the relevant circle against the Question in the O.M.R. Answer Sheet. For example, in the question paper if "C" is correct answer for Question No.8, then darken against Sl. No.8 of O.M.R. Answer Sheet using Blue/Black Ball Point Pen as follows:

   Question No. 8. Ⓐ Ⓑ ● Ⓓ (Only example) (Use Ball Pen only)
5. Rough work should be done only on the blank space provided in the Question Booklet. Rough work should not be done on the O.M.R. Answer Sheet.
6. If more than one circle is darkened for a given question, such answer is treated as wrong and no mark will be given. See the example in the O.M.R. Sheet.
7. The candidate and the Room Supervisor should sign in the O.M.R. Sheet at the specified place.
8. Candidate should return the original O.M.R. Answer Sheet and the university copy to the Room Supervisor after the examination.
9. Candidate can carry the question booklet and the candidate copy of the O.M.R. Sheet.
10. The calculator, pager and mobile phone are not allowed inside the examination hall.
11. If a candidate is found committing malpractice, such a candidate shall not be considered for admission to the course and action against such candidate will be taken as per rules.
12. Candidates have to get qualified in the respective entrance examination by securing a minimum of 8 marks in case of SC/ST/Cat-I Candidates, 9 marks in case of OBC Candidates and 10 marks in case of other Candidates out of 50 marks.

## INSTRUCTIONS TO FILL UP THE O.M.R. SHEET

1. There is only one most appropriate/correct answer for each question.
2. For each question, only one circle must be darkened with BLUE or BLACK ball point pen only. Do not try to alter it.
3. Circle should be darkened completely so that the alphabet inside it is not visible.
4. Do not make any unnecessary marks on O.M.R. Sheet.
5. Mention the number of questions answered in the appropriate space provided in the O.M.R. sheet otherwise O.M.R. sheet will not be subjected for evaluation.

ಗಮನಿಸಿ : ಸೂಚನೆಗಳ ಕನ್ನಡ ಆವೃತ್ತಿಯು ಈ ಪುಸ್ತಕದ ಹಿಂಭಾಗದಲ್ಲಿ ಮುದ್ರಿಸಲ್ಪಟ್ಟಿದೆ.

**1)** According to the Nebular Theory, what is the initial stage in the formation of the solar system?

(A) Formation of planets

(B) Collapse of a gas and dust cloud

(C) Creation of the sun

(D) Separation of elements

ನೀಹಾರಿಕೆ ಸಿದ್ಧಾಂತದ ಪ್ರಕಾರ, ಸೌರಮಂಡಲದ ನಿರ್ಮಾಣದ ಮೊದಲ ಹಂತ ಏನು?

(A) ಗ್ರಹಗಳ ರಚನೆ

(B) ಅನಿಲ ಮತ್ತು ಧೂಳಿನ ಮೋಡದ ಕುಸಿತ

(C) ಸೂರ್ಯನ ನಿರ್ಮಾಣ

(D) ಅಂಶಗಳ ಪ್ರತ್ಯೇಕತೆ

**2)** In the Tidal Theory, what happens to the ejected material from the sun?

(A) It drifts away into space

(B) It forms a second sun

(C) It coalesces to form planets

(D) It forms a ring around the sun

ಉಬ್ಬರವಿಳಿತ ಸಿದ್ಧಾಂತದ ಪ್ರಕಾರ, ಸೂರ್ಯನಿಂದ ಹೊರದೂಡಿದ ವಸ್ತುಗಳು ಏನಾಗುತ್ತದೆ?

(A) ಅದು ಬಾಹ್ಯಾಕಾಶದಿಂದ ದೂರ ಹೋಗುತ್ತದೆ

(B) ಅದು ಎರಡನೇ ಸೂರ್ಯವನ್ನು ರೂಪಿಸುತ್ತದೆ

(C) ಅದು ಗ್ರಹಗಳನ್ನು ರೂಪಿಸುತ್ತದೆ

(D) ಅದು ಸೂರ್ಯನ ಸುತ್ತಲೂ ಒಂದು ಸುರುಳಿ ರಚಿಸುತ್ತದೆ

**3)** According to the Continental Drift Theory, the continents were once part of a single landmass called:

(A) Laurasia (B) Gondwana

(C) Pangea (D) Atlantis

ಭೂಖಂಡಗಳ ಅಲೆತ ಸಿದ್ಧಾಂತದ ಪ್ರಕಾರ, ಹಿಂದೊಮ್ಮೆ ಎಲ್ಲಾ ಖಂಡಗಳು ಒಂದೇ ಭೂಪ್ರದೇಶದ ಭಾಗವಾಗಿದ್ದು ಅದನ್ನು ಏನೆಂದು ಕರೆಯುತ್ತಾರೆ?

(A) ಲಾರೆಸಿಯಾ (B) ಗೊಂಡ್ವಾನಾ

(C) ಪ್ಯಾಂಜಿಯಾ (D) ಅಟ್ಲ್ಯಾಂಟಿಸ್

4) Metamorphic rocks are primarily identified by:

(A) Their original formation environment

(B) The presence of sediment layers

(C) Changes in mineral composition and texture due to heat and pressure

(D) Volcanic activity

ರೂಪಾಂತರ ಶಿಲೆಗಳನ್ನು ಪ್ರಾಥಮಿಕವಾಗಿ ಹೇಗೆ ಗುರುತಿಸುತ್ತಾರೆ?

(A) ಅವರ ಮೂಲ ರಚನೆ ಪರಿಸರ

(B) ಸೆಡಿಮೆಂಟ್ ಪದರಗಳ ಉಪಸ್ಥಿತಿ

(C) ಶಾಖ ಮತ್ತು ಒತ್ತಡದಿಂದಾಗಿ ಖನಿಜ ಸಂಯೋಜನೆ ಮತ್ತು ವಿನ್ಯಾಸದಲ್ಲಿನ ಬದಲಾವಣೆಗಳು

(D) ಜ್ವಾಲಾಮುಖಿ ಚಟುವಟಿಕೆ

5) Physical weathering, also known as mechanical weathering, primarily involves:

(A) The alteration of the mineral composition of rocks

(B) The breakdown of rocks into smaller pieces without changing their composition

(C) The decomposition of organic materials

(D) The dissolution of rocks in water

ಭೌತಿಕ ಶಿಥಿಲಿಕರಣವನ್ನು ಯಾಂತ್ರಿಕ ಶಿಥಿಲಿಕರಣವೆಂದು ಕೂಡ ಕರೆಯಲಾಗುತ್ತದೆ, ಇದು ಪ್ರಾಥಮಿಕವಾಗಿ ಏನನ್ನು ಒಳಗೊಂಡಿರುವುದು?

(A) ಶಿಲೆಗಳ ಖನಿಜ ಸಂಯೋಜನೆಯ ಬದಲಾವಣೆ

(B) ಶಿಲೆಗಳು ಅವುಗಳ ಸಂಯೋಜನೆಯನ್ನು ಬದಲಾಯಿಸದೆ ಸಣ್ಣ ತುಣುಕುಗಳಾಗಿ ವಿಭಜಿಸುವುದು

(C) ಸಾವಯವ ವಸ್ತುಗಳ ವಿಘಟನೆ

(D) ಶಿಲೆಗಳ ನೀರಿನಲ್ಲಿ ಕರಗುವುದು

**6)** The forces that shape the earth's surface are divided into two main categories. Which of the following is NOT one of these categories?

(A) Endogenic forces (B) Exogenic forces

(C) Isostatic forces (D) Tectonic forces

ಭೂಮಿಯ ಮೇಲ್ಮೈಯನ್ನು ರೂಪಿಸುವ ಶಕ್ತಿಗಳನ್ನು ಎರಡು ಪ್ರಮುಖ ವರ್ಗಗಳಾಗಿ ವಿಂಗಡಿಸಲಾಗಿದೆ. ಕೆಳಗಿನವುಗಳಲ್ಲಿ ಯಾವುದು ಈ ವರ್ಗಗಳಲ್ಲಿ ಒಂದು ಅಲ್ಲ?

(A) ಎಂಡೋಜೆನಿಕ್ ಶಕ್ತಿಗಳು (B) ಎಕ್ಸೋಜೆನಿಕ್ ಶಕ್ತಿಗಳು

(C) ಐಸೋಸ್ಟಾಟಿಕ್ ಶಕ್ತಿಗಳು (D) ಟೆಕ್ಟೋನಿಕ್ ಶಕ್ತಿಗಳು

**7)** Epirogenic movements are characterized by:

(A) Intense folding and faulting

(B) Broad and gentle warping of the crust

(C) Violent volcanic activity

(D) Rapid horizontal movements

ಎಪಿರೋಜೆನಿಕ್ ಚಲನೆಯು ಈ ಲಕ್ಷಣಗಳಿಂದ ನಿರೂಪಿಸಲಾಗಿದೆ

(A) ತೀವ್ರ ತೆರನಾದ ಮಡಿಕೆಗಳು ಹಾಗೂ ಸ್ಥರಭಂಗಗಳು

(B) ಭೂಮಿಯ ಹೊರ ಪದರವು ವಿಸ್ತೃತ ತಿರುಗಾಣಿಕೆ ಹೊಂದಿರುತ್ತವೆ

(C) ತೀವ್ರತರವಾದ ಜ್ವಾಲಾಮುಖಿ ಚಟುವಟಿಕೆಗಳಿಂದ ಕೂಡಿವೆ

(D) ತೀವ್ರ ವೇಗದ ಸಮತಲ ಚಲನೆ

**8)** Match the following types of seismic waves with their characteristics:

a) P-waves

b) S-waves

c) Surface waves

1) Travel through solids, liquids, and gases

2) Travel only through solids

3) Cause the most damage on the Earth's surface

(A) a1, b2, c3 (B) a3, b1, c2

(C) a2, b3, c1 (D) a1, b3, c2

ಕೆಳಗಿನ ಸಂಚಲನ ಅಲೆಗಳ ಮತ್ತು ಅವುಗಳ ಗುಣಲಕ್ಷಣಗಳ ನಡುವಿನ ಹೊಂದಾಣಿಕೆ

a) P-ಅಲೆಗಳು

b) S-ಅಲೆಗಳು

c) ಮೇಲ್ಮೈ ಅಲೆಗಳು

1) ಘನ, ದ್ರವ, ಮತ್ತು ವಾಯುಗಳ ಮೂಲಕ ಪ್ರಯಾಣಿಸುತ್ತವೆ

2) ಕೇವಲ ಘನಗಳ ಮೂಲಕ ಪ್ರಯಾಣಿಸುತ್ತವೆ

3) ಭೂಮಿಯ ಮೇಲ್ಮೈಯಲ್ಲಿ ಅತ್ಯಂತ ಹಾನಿ ಉಂಟುಮಾಡುತ್ತವೆ

(A) a1, b2, c3 (B) a3, b1, c2

(C) a2, b3, c1 (D) a1, b3, c2

**9)** The depression formed at the summit of a volcano after a major eruption and collapse is called a _______.

(A) Crater (B) Caldera

(C) Vent (D) Lava dome

ದೊಡ್ಡ ಸ್ಫೋಟದ ನಂತರ ಜ್ವಾಲಾಮುಖಿಯ ಶಿಖರದಲ್ಲಿ ಕುಸಿತದಿಂದ ಉಂಟಾಗುವ ಭೂಸ್ವರೂಪವನ್ನು _______ಎಂದು ಕರೆಯುತ್ತಾರೆ.

(A) ಕ್ರೇಟರ್ (B) ಕಾಲ್ಡೆರಾ

(C) ವೆಂಟ್ (D) ಲಾವಾ ಗುಡ್ಡ

**10)** V-shaped valleys are formed by

(A) Wind erosion (B) River erosion

(C) Glacier erosion (D) Sea wave erosion

V-ಆಕಾರದ ಕಣಿವೆಗಳು ಇದರಿಂದ ರೂಪುಗೊಳ್ಳುತ್ತವೆ

(A) ಗಾಳಿಯ ಸವೆತ (B) ನದಿಯ ಸವೆತ

(C) ಹಿಮನದಿಯ ಸವೆತ (D) ಸಮುದ್ರ ಅಲೆಗಳ ಸವೆತ

11) Which of the following gases is the most abundant in the Earth's atmosphere?

(A) Oxygen (B) Nitrogen

(C) Carbon Dioxide (D) Argon

ಭೂಮಿಯನ್ನು ಆವರಿಸಿರುವ ವಾಯುಮಂಡಲದಲ್ಲಿ ಹೆಚ್ಚಾಗಿ ಕಂಡುಬರುವ ಅನಿಲ ಯಾವುದು?

(A) ಆಮ್ಲಜನಕ (B) ಸಾರಜನಕ

(C) ಇಂಗಾಲದ ಡೈಆಕ್ಸೈಡ್ (D) ಅರ್ಗಾನ್

12) Which of the following best describes the difference between weather and climate?

(A) Weather is long-term atmospheric conditions; climate is short-term atmospheric conditions.

(B) Weather is short-term atmospheric conditions; climate is long-term atmospheric conditions.

(C) Weather is related to the atmosphere; climate is related to the hydrosphere.

(D) Weather and climate are interchangeable terms.

ಹವಾಮಾನ ಮತ್ತು ವಾತಾವರಣದ ನಡುವಿನ ವ್ಯತ್ಯಾಸವನ್ನು ಯಾವುದು ಉತ್ತಮವಾಗಿ ವಿವರಿಸುತ್ತದೆ?

(A) ಹವಾಮಾನದ ದೀರ್ಘಕಾಲದ ವಾತಾವರಣದ ಸ್ಥಿತಿಗಳು; ವಾಯುಗುಣವು ಅಲ್ಪಾವಧಿಯ ವಾತಾವರಣದ ಸ್ಥಿತಿಗಳು

(B) ಹವಾಮಾನದ ಅಲ್ಪಾವಧಿಯ ವಾತಾವರಣದ ಸ್ಥಿತಿಗಳು; ವಾಯುಗುಣವು ದೀರ್ಘಕಾಲದ ವಾತಾವರಣದ ಸ್ಥಿತಿಗಳು

(C) ಹವಾಮಾನವು ವಾಯುಗುಣದೊಂದಿಗೆ ಸಂಬಂಧ ಹೊಂದಿದೆ; ವಾಯುಗುಣವು ಜಲಮಂಡಲದೊಂದಿಗೆ ಸಂಬಂಧ ಹೊಂದಿದೆ

(D) ಹವಾಮಾನ ಮತ್ತು ವಾಯುಗುಣವು ಪರಸ್ಪರ ಬದಲಾಯಿಸಬಹುದಾದ ಪದಗಳು

13) Which of the following is a common cause of temperature inversion?

(A) High altitude

(B) Rapid cooling of the ground at night

(C) Increased solar radiation during the day

(D) High humidity

ಉಷ್ಣಾಂಶದ ವ್ಯತ್ಯಯಕ್ಕೆ ಸಾಮಾನ್ಯ ಕಾರಣ ಯಾವುದು?

(A) ಹೆಚ್ಚಿನ ಎತ್ತರ

(B) ರಾತ್ರಿ ಸಮಯದಲ್ಲಿ ನೆಲದ ತ್ವರಿತ ತಂಪಾಗುವಿಕೆ

(C) ಹಗಲಿನ ಅವಧಿಯಲ್ಲಿ ಸೌರ ವಿಕಿರಣದ ಹೆಚ್ಚಳ

(D) ಹೆಚ್ಚಿನ ಆರ್ದ್ರತೆ

**14)** Insolation is the measure of solar radiation received per unit area at a given time. Which of the following factors affects insolation?

(A) Latitude (B) Time of day

(C) Season (D) All of the above

ಇನ್ಸೋಲೇಶನ್ ಅಂದರೆ ನಿರ್ದಿಷ್ಟ ಪ್ರದೇಶದಲ್ಲಿ ನಿರ್ದಿಷ್ಟ ಸಮಯದಲ್ಲಿ ಸ್ವೀಕರಿಸಿದ ಸೌರ ವಿಕಿರಣದ ಮಾಪನವೆಂದು ಕರೆಯುತ್ತಾರೆ. ಕೆಳಗಿನ ಯಾವ ಅಂಶವು ಇನ್ಸೋಲೇಶನ್ ಮೇಲೆ ಪ್ರಭಾವ ಬೀರುತ್ತದೆ?

(A) ಅಕ್ಷಾಂಶ (B) ದಿನದ ಸಮಯ

(C) ಋತು (D) ಮೇಲಿನ ಎಲ್ಲಾ

**15)** The layer of the atmosphere where temperature increases with altitude due to the presence of the ozone layer is the _______.

(A) Troposphere (B) Stratosphere

(C) Mesosphere (D) Thermosphere

ಓಜೋನ್ ಪದರವನ್ನು ಹೊಂದಿರುವ ಕಾರಣದಿಂದಾಗಿ ಎತ್ತರದೊಂದಿಗೆ ತಾಪಮಾನವು ಏರಿಕೆಯಾಗುವ ವಾಯುಮಂಡಲದ ಪದರ______.

(A) ಪರಿವರ್ತನಾ ಮಂಡಲ (B) ಸಮೋಷ್ಣ ಮಂಡಲ

(C) ಮಧ್ಯಂತರ ಮಂಡಲ (D) ಉಷ್ಣತಾ ಮಂಡಲ

**16)** Match the following pressure belts with their characteristics:

a) Equatorial Low

b) Subtropical High

c) Sub polar Low

d) Polar High

1) Found around 60° latitude, characterized by low pressure

2) Found around 30° latitude, characterized by high pressure

3) Found near the poles, characterized by high pressure

4) Found near the equator, characterized by low pressure

(A) a4, b2, c1, d3 (B) a4, b1, c3, d2

(C) a1, b2, c4, d3 (D) a3, b2, c1, d4

ಕೆಳಗಿನ ಒತ್ತಡದ ಪಟ್ಟಿಗಳನ್ನು ಅವುಗಳ ಲಕ್ಷಣಗಳೊಂದಿಗೆ ಹೊಂದಿಸಿ:

a) ಸಮಭಾಜಕವೃತ್ತದ ಕಡಿಮೆ ಒತ್ತಡ

b) ಉಪಉಷ್ಣವಲಯದ ಅಧಿಕ ಒತ್ತಡ

c) ಉಪಧ್ರುವಿಯ ಕಡಿಮೆ ಒತ್ತಡ

d) ಧ್ರುವಿಯ ಅಧಿಕ ಒತ್ತಡ

1) ಸುಮಾರು 60° ಅಕ್ಷಾಂಶದ ಬಳಿ ಕಂಡುಬರುತ್ತಿದ್ದು, ಕಡಿಮೆ ಒತ್ತಡ ಲಕ್ಷಣಗಳನ್ನು ಹೊಂದಿದೆ

2) ಸುಮಾರು 30° ಅಕ್ಷಾಂಶದ ಬಳಿ ಕಂಡುಬರುತ್ತಿದ್ದು, ಹೆಚ್ಚು ಒತ್ತಡದ ಲಕ್ಷಣಗಳನ್ನು ಹೊಂದಿದೆ

3) ಧ್ರುವಗಳ ಬಳಿ ಕಂಡುಬರುತ್ತಿದ್ದು, ಹೆಚ್ಚು ಒತ್ತಡದ ಲಕ್ಷಣಗಳನ್ನು ಹೊಂದಿದೆ

4) ಭೂಮಧ್ಯ ರೇಖೆಯ ಬಳಿ ಕಂಡುಬರುತ್ತಿದ್ದು, ಕಡಿಮೆ ಒತ್ತಡದ ಲಕ್ಷಣಗಳನ್ನು ಹೊಂದಿದೆ

(A) a4, b2, c1, d3 (B) a4, b1, c3, d2

(C) a1, b2, c4, d3 (D) a3, b2, c1, d4

**17)** Which of the following statements about the distribution of atmospheric pressure is correct?

(A) Pressure is uniformly distributed across the Earth's surface.

(B) Pressure belts shift with the seasons.

(C) The highest pressures are found at the equator.

(D) Pressure does not change with altitude.

ವಾತಾವರಣದ ಒತ್ತಡದ ವಿತರಣೆಯ ಬಗ್ಗೆ ಕೆಳಗಿನ ಹೇಳಿಕೆ ಸರಿಯಾಗಿದೆ?

(A) ಒತ್ತಡವು ಭೂಮೇಲ್ಮೈಯಲ್ಲಿ ಸಮವಾಗಿ ಹಂಚಿಕೆಯಾಗಿದೆ

(B) ಒತ್ತಡದ ಪಟ್ಟಿಗಳು ಋತುವಿನೊಂದಿಗೆ ಬದಲಾಗುತ್ತವೆ

(C) ಹೆಚ್ಚು ಒತ್ತಡವು ಭೂಮಿಯ ಸಮಭಾಜಕ ವೃತ್ತದ ಬಳಿ ಕಂಡುಬರುತ್ತದೆ

(D) ಒತ್ತಡವು ಎತ್ತರದೊಂದಿಗೆ ಬದಲಾಗುವುದಿಲ್ಲ

**18)** Which of the following is a characteristic of planetary winds?

(A) They blow from high-pressure to low-pressure areas.

(B) They are short-term and change direction frequently.

(C) They are influenced primarily by local topography.

(D) They only occur during specific seasons.

ನಿರಂತರ ಮಾರುತಗಳ ಲಕ್ಷಣ ಯಾವುದು?

(A) ಅವುಗಳು ಅಧಿಕ ಒತ್ತಡದಿಂದ ಕಡಿಮೆ ಒತ್ತಡದ ಪ್ರದೇಶಗಳಿಗೆ ಬೀಸುತ್ತವೆ

(B) ಅವುಗಳು ಅಲ್ಪಕಾಲಿಕವಾಗಿರುತ್ತವೆ ಮತ್ತು ಪದೇಪದೇ ದಿಕ್ಕನ್ನು ಬದಲಿಸುತ್ತವೆ

(C) ಅವುಗಳು ಪ್ರಾಥಮಿಕವಾಗಿ ಸ್ಥಳೀಯ ಸ್ಥಳಸ್ವರೂಪಗಳಿಗೆ ಪ್ರಭಾವಿತವಾಗುತ್ತವೆ

(D) ಅವುಗಳು ನಿರ್ದಿಷ್ಟ ಋತುಮಾನಗಳಲ್ಲಿ ಮಾತ್ರ ಸಂಭವಿಸುತ್ತವೆ

19) Absolute humidity is defined as the:

(A) Percentage of water vapor in the air relative to the amount it can hold at that temperature.

(B) Total amount of water vapor present in a given volume of air.

(C) Ratio of the actual water vapor pressure to the saturation vapor pressure.

(D) Difference between the wet-bulb and dry-bulb temperature.

ಸಮಗ್ರ ಆರ್ದ್ರತೆಯನ್ನು ಹೀಗೆ ವ್ಯಾಖ್ಯಾನಿಸಬಹುದಾಗಿದೆ:

(A) ಆ ತಾಪಮಾನದಲ್ಲಿ ಹಿಡಿದಿಡಬಹುದಾದ ನೀರಿನ ಆವಿಯ ಪ್ರಮಾಣಕ್ಕೆ ಸಂಬಂಧಿಸಿದ ಗಾಳಿಯ ನೀರಿನ ಆವಿಯ ಶೇಕಡವಾರು ಪ್ರಮಾಣ

(B) ನಿರ್ದಿಷ್ಟ ಗಾಳಿಯ ಪ್ರಮಾಣದಲ್ಲಿ ಇರುವ ಒಟ್ಟು ನೀರಿನ ಆವಿಯ ಪ್ರಮಾಣ

(C) ನಿಜವಾದ ನೀರಿನ ಆವಿಯ ಒತ್ತಡದ ಪ್ರಮಾಣವನ್ನು ಸಂಪೂರ್ಣ ಒತ್ತಡದ ಪ್ರಮಾಣಕ್ಕೆ ಹೊಂದಿಸುವುದು

(D) ಒಣಬುರುಡೆ ಮತ್ತು ತೇವಬುರುಡೆ ಉಷ್ಣತಾಮಾಪನಗಳಲ್ಲಿನ ವ್ಯತ್ಯಾಸ

20) Which type of rainfall is caused by the lifting of moist air over a mountain?

(A) Convectional rainfall (B) Cyclonic rainfall

(C) Orographic rainfall (D) Frontal rainfall

ತೇವಭರಿತವಾದ ವಾಯುರಾಶಿಯ ಪರ್ವತದ ಎತ್ತರಕ್ಕೆ ಏರಿ ಉಂಟಾದ ಮಳೆಯನ್ನು ಏನೆಂದು ಕರೆಯುತ್ತಾರೆ?

(A) ಸಂಕೋಚನ ಮಳೆ (B) ಚಕ್ರವಾತದ ಮಳೆ

(C) ಪರ್ವತ ಮಳೆ (D) ಮುಂಭಾಗದ ಮಳೆ

21) Which of the following is the deepest part of the ocean floor?

(A) Mid-ocean ridges (B) Continental shelves

(C) Abyssal plains (D) Oceanic trenches

ಕೆಳಗಿನ ಯಾವುದು ಸಮುದ್ರ ತಳದ ಆಳವಾದ ಭಾಗವಾಗಿದೆ?

(A) ಮಧ್ಯ–ಸಮುದ್ರ ಶ್ರೇಣಿಗಳು (B) ಖಂಡದ ಅಂಚುಗಳು

(C) ಅಬೈಸಲ್ ಸಮತಟ್ಟುಗಳು (D) ಸಮುದ್ರ ಕಣಿವೆಗಳು

22) What primarily causes ocean tides?

(A) Gravitational pull of the Moon and Sun

(B) Rotation of the Earth

(C) Underwater volcanic activity

(D) Magnetic forces from the Earth's core

ಸಾಗರದಲ್ಲಿ ಉಬ್ಬರವಿಳಿತಕ್ಕೆ ಮುಖ್ಯ ಕಾರಣ?

(A) ಚಂದ್ರ ಮತ್ತು ಸೂರ್ಯನ ಗುರುತ್ವಾಕರ್ಷಣೆ

(B) ಭೂಮಿಯ ಪರಿಭ್ರಮಣ

(C) ನೀರಿನಲ್ಲಿ ದಾಟುವ ಅಕ್ರಮವಾದ ಸಂಗತಿ

(D) ಭೂಮಿಯ ಕೋರ್ ಚಾಲನೆ

23) Which of the following mountain ranges is known as the "Roof of the World"?

(A) Andes Mountains (B) Himalayas

(C) Rocky Mountains (D) Alps

ಈ ಕೆಳಗಿನ ಯಾವ ಪರ್ವತ ಶ್ರೇಣಿಯನ್ನು "ಪ್ರಪಂಚದ ಮೇಲ್ಛಾವಣಿ" ಎಂದು ಗುರುತಿಸಲಾಗಿದೆ?

(A) ಆಂಡೀಸ್ ಪರ್ವತಗಳು (B) ಹಿಮಾಲಯ ಪರ್ವತಗಳು

(C) ರಾಕಿ ಪರ್ವತಗಳು (D) ಆಲ್ಪ್ಸ್ ಪರ್ವತಗಳು

24) According to Köppen's classification, which climate type is characterized by hot, wet summers and mild, dry winters?

(A) Tropical Rainforest (Af) (B) Tropical Savannah (Aw)

(C) Mediterranean (Csa) (D) Humid Subtropical (Cfa)

ಕೊಪನ್ ವಿಂಗಡಣೆಯ ಪ್ರಕಾರ, ಕೆಳಗಿನ ಯಾವ ಹವಾಮಾನ ಪ್ರಕಾರವು ಶಾಖ, ತೇವಭರಿತ ಗ್ರೀಷ್ಮಕಾಲ ಮತ್ತು ಸೌಮ್ಯ ಒಣಕಾಲಗಳಿಂದ ತೊಡಗಿದೆ?

(A) ಉಷ್ಣವಲಯದ ಮಳೆ ಕಾಡು (Af) (B) ಉಷ್ಣವಲಯದ ಸವಾನ್ನಾ (Aw)

(C) ಮೆಡಿಟೆರೇನಿಯನ್ (Csa) (D) ತೇವಭರಿತ ಉಪಉಷ್ಣವಲಯ (Cfa)

25) Which is the longest river in the world?

(A) Amazon River (B) Nile River

(C) Yangtze River (D) Mississippi River

ಪ್ರಪಂಚದ ಅತ್ಯಂತ ಉದ್ದದ ನದಿ ಯಾವುದು?

(A) ಅಮೇಜಾನ್ ನದಿ (B) ನೈಲ್ ನದಿ

(C) ಯಾಂಗ್‌ಟ್ಜೆ ನದಿ (D) ಮಿಸಿಸಿಪ್ಪಿ ನದಿ

26) Which type of natural vegetation is characterized by broadleaf evergreen trees and is found in the equatorial region?

(A) Tundra (B) Taiga

(C) Tropical Rainforest (D) Savannah

ಯಾವ ಪ್ರಕಾರದ ನೈಸರ್ಗಿಕ ಸಸ್ಯಗಳನ್ನು ಶಾಶ್ವತ ಹಸಿರು ದೊಡ್ಡ ಎಲೆಗಳನ್ನು ಹೊಂದಿದೆ ಮತ್ತು ಸಮಭ್ಯಾಜ ಪ್ರದೇಶದಲ್ಲಿ ಕಂಡುಬರುತ್ತದೆ?

(A) ಟಂಡ್ರಾ (B) ಟೈಗಾ

(C) ಉಷ್ಣವಲಯದ ಮಳೆಕಾಡು (D) ಸವಾನ್ನಾ

27) Which type of agriculture is characterized by large-scale monoculture of cash crops?

(A) Subsistence Farming (B) Intensive Farming

(C) Plantation Agriculture (D) Mixed Farming

ಏಕಪ್ರಕಾರದ ಬೆಳೆಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸುವ ಕೃಷಿಯ ಪ್ರಕಾರವೇನು?

(A) ಜೀವನಾಧಾರ ಬೇಸಾಯ (B) ಸಾಂದ್ರ ಬೇಸಾಯ

(C) ತೋಟಗಾರಿಕೆ ಬೇಸಾಯ (D) ಮಿಶ್ರ ಬೇಸಾಯ

28) Which of the following is a major industrial region in North America?

(A) Ruhr Valley (B) Great Lakes Region

(C) Kanto Plain (D) Donetsk Basin

ಕೆಳಗಿನವುಗಳಲ್ಲಿ ಯಾವುದು ಉತ್ತರ ಅಮೇರಿಕಾದ ಪ್ರಮುಖ ಕೈಗಾರಿಕಾ ಪ್ರದೇಶವಾಗಿದೆ?

(A) ರುಹ್ರ್ ಕಣಿವೆ (B) ಗ್ರೇಟ್ ಲೇಕ್ಸ್ ಪ್ರದೇಶ

(C) ಕಾಂತೋ ಮೈದಾನ (D) ಡೊನೆಟ್ಸ್ಕ ಜಲಾನಯನ ಪ್ರದೇಶ

**29)** Which of the following regions has the highest population density?

(A) Sahara Desert (B) Amazon Rainforest

(C) South Asia (D) Northern Canada

ಈ ಪ್ರದೇಶಗಳಲ್ಲಿ ಯಾವುದು ಅತ್ಯಧಿಕ ಜನಸಂಖ್ಯಾ ಸಾಂದ್ರತೆ ಹೊಂದಿದೆ?

(A) ಸಹರಾ ಮರುಭೂಮಿ (B) ಅಮೆಜಾನ್ ಮಳೆಕಾಡು

(C) ದಕ್ಷಿಣ ಏಷ್ಯಾ (D) ಉತ್ತರ ಕೆನಡಾ

**30)** Which stage of the demographic cycle is characterized by high birth rates and high death rates?

(A) Stage 1: High Stationary (B) Stage 2: Early Expanding

(C) Stage 3: Late Expanding (D) Stage 4: Low Stationary

ಜನಸಂಖ್ಯಾ ಚಕ್ರದ ಯಾವ ಹಂತವು ಹೆಚ್ಚಿನ ಜನನ ಪ್ರಮಾಣ ಮತ್ತು ಹೆಚ್ಚಿನ ಮರಣ ಪ್ರಮಾಣದಿಂದ ಕೂಡಿರುತ್ತದೆ?

(A) ಹಂತ 1 : ಹೆಚ್ಚಿನ ಸ್ಥಿರ (B) ಹಂತ 2 : ಪ್ರಾರಂಭಿಕ ವಿಸ್ತರಣೆ

(C) ಹಂತ 3 : ತಡ ವಿಸ್ತರಣೆ (D) ಹಂತ 4 : ಕಡಿಮೆ ಸ್ಥಿರ

**31)** Which of the following best illustrates the concept of possibilism?

(A) The belief that deserts cannot be inhabited.

(B) Building irrigation systems to farm in arid regions.

(C) Assuming mountainous regions are uninhabitable.

(D) Relying solely on natural weather patterns for agriculture.

ಈ ಕೆಳಗಿನವುಗಳಲ್ಲಿ ಯಾವುದು ಸಾಧ್ಯತಾವಾದದ ಪರಿಕಲ್ಪನೆಯನ್ನು ಉತ್ತಮವಾಗಿ ಪ್ರತಿಬಿಂಬಿಸುತ್ತದೆ?

(A) ಮರುಭೂಮಿಗಳು ವಾಸಿಸುವಂತಿಲ್ಲ ಎಂಬ ನಂಬಿಕೆ

(B) ಒಣ ಪ್ರದೇಶಗಳಲ್ಲಿ ಕೃಷಿಗಾಗಿ ನೀರಾವರಿ ವ್ಯವಸ್ಥೆಗಳನ್ನು ನಿರ್ಮಿಸುವುದು

(C) ಪರ್ವತ ಪ್ರದೇಶಗಳು ವಾಸಿಸುವಂತಿಲ್ಲ ಎಂದು ಊಹಿಸುವುದು

(D) ಕೃಷಿಗಾಗಿ ಕೇವಲ ನೈಸರ್ಗಿಕ ಹವಾಮಾನ ಮಾದರಿಗಳನ್ನು ಅವಲಂಬಿಸುವುದು

**32)** Who is considered a key proponent of environmental determinism?

(A) Carl Sauer (B) Friedrich Ratzel

(C) Vidal de la Blache (D) David Harvey

ಪರಿಸರ ಪ್ರಭುತ್ವವಾದದ ಪ್ರಕಾರ ಪ್ರಮುಖ ವಕ್ತಾರ ಎಂದು ಯಾರನ್ನು ಪರಿಗಣಿಸಲಾಗುತ್ತದೆ?

(A) ಕಾರ್ಲ್‌ಸೌರ್ (B) ಫ್ರಿಡ್ರಿಚ್ ರಾಟ್ಜೆಲ್

(C) ವಿಡಾಲ್ ಡಿ ಲಾ ಬ್ಲಾಚ್ (D) ಡೇವಿಡ್ ಹಾರ್ವಿ

**33)** The concept of race primarily refers to:

(A) Cultural practices

(B) Genetic heritage and physical characteristics

(C) Political affiliations

(D) Economic status

ಮಾನವಜನಾಂಗ ಪರಿಕಲ್ಪನೆ ಮುಖ್ಯವಾಗಿ ಇದನ್ನು ಸೂಚಿಸುತ್ತದೆ:

(A) ಸಾಂಸ್ಕೃತಿಕ ಅಭ್ಯಾಸಗಳು

(B) ಜೈವಿಕ ಪರಂಪರೆ ಮತ್ತು ದೈಹಿಕ ಲಕ್ಷಣಗಳು

(C) ರಾಜಕೀಯ ಅನುಗುಣತೆಗಳು

(D) ಆರ್ಥಿಕ ಸ್ಥಿತಿ

**34)** Which religion is associated with the concept of karma and reincarnation?

(A) Christianity (B) Hinduism

(C) Islam (D) Judaism

ಕರ್ಮ ಮತ್ತು ಪುನರ್ಜನ್ಮ ಪರಿಕಲ್ಪನೆಯು ಯಾವ ಧರ್ಮದೊಂದಿಗೆ ಸಂಬಂಧಿಸಿದೆ?

(A) ಕ್ರೈಸ್ತ ಧರ್ಮ (B) ಹಿಂದೂ ಧರ್ಮ

(C) ಇಸ್ಲಾಂ ಧರ್ಮ (D) ಯಹೂದಿ ಧರ್ಮ

**35)** Which of the following is a potential consequence of large-scale migration on the host country?

(A) Decrease in population density (B) Economic stagnation

(C) Increased cultural diversity (D) Improved infrastructure

ದೊಡ್ಡ ಪ್ರಮಾಣದ ವಲಸೆಗಳಾಗುವ ದೇಶದ ಮೇಲಿನ ಸಾಧ್ಯವಾದ ಪರಿಣಾಮಗಳಲ್ಲಿ ಯಾವುದು ಸರಿ?

(A) ಜನಸಾಂದ್ರತೆಯಲ್ಲಿ ಕಡಿತ (B) ಆರ್ಥಿಕ ನಿಶ್ಚಲತೆ

(C) ಸಾಂಸ್ಕೃತಿಕ ವೈವಿಧ್ಯತೆಯಲ್ಲಿ ಹೆಚ್ಚಳ (D) ಸುಧಾರಿತ ಮೂಲಸೌಕರ್ಯ

**36)** What type of traditional dwelling is commonly associated with Eskimos?

(A) Tepee (B) Igloo

(C) Yurt (D) Hut

ಎಸ್ಕಿಮೋಸ್‌ಗಳೊಂದಿಗೆ ಸಾಮಾನ್ಯವಾಗಿ ಸಂಬಂಧಿಸಿದ ಸಾಂಪ್ರದಾಯಿಕ ನಿವಾಸದ ಪ್ರಕಾರ ಯಾವುದು?

(A) ಟಿಪಿ (B) ಇಗ್ಲೂ

(C) ಯುರ್ಟ್ (D) ಹಟ್

**37)** Which of the following is an example of a linear settlement pattern?

(A) A village with houses spread out in fields

(B) A city with buildings along a river

(C) A town with houses around a central square

(D) A rural area with scattered farmhouses

ರೇಖಾಕಾರ ವಾಸಸ್ಥಳದ ಮಾದರಿಯ ಉದಾಹರಣೆಯಾಗಿ ಯಾವುದು ಗುರುತಿಸಲಾಗಿದೆ?

(A) ಹೊಲಗಳಲ್ಲಿ ಹರಡಿಕೊಂಡಿರುವ ಮನೆಗಳಿರುವ ಹಳ್ಳಿ

(B) ನದಿಯ ಇಕ್ಕೆಲಗಳಲ್ಲಿ ಹರಡಿರುವ ನಗರ

(C) ಕೇಂದ್ರ ಚೌಕದ ಸುತ್ತಲೂ ಮನೆಗಳನ್ನು ಹೊಂದಿರುವ ಪಟ್ಟಣ

(D) ಅಲ್ಲಲ್ಲಿ ತೋಟದ ಮನೆಗಳನ್ನು ಹೊಂದಿರುವ ಗ್ರಾಮೀಣ ಪ್ರದೇಶ

**38)** Which concept refers to a state's right to govern itself without external interference?

(A) Nationalism (B) Sovereignty

(C) Federalism (D) Autonomy

ಹೊರಗಿನ ಹಸ್ತಕ್ಷೇಪವಿಲ್ಲದೆ ರಾಜ್ಯದ ಸ್ವಯಂ ಆಡಳಿತದ ಹಕ್ಕನ್ನು ಸೂಚಿಸುವ ಅರ್ಥದ ಪದವೇನು?

(A) ರಾಷ್ಟ್ರವಾದ (B) ಪ್ರಭುತ್ವ

(C) ಫೆಡರಲಿಸಂ (D) ಸ್ವಾಯತ್ತತೆ

**39)** India shares its longest international boundary with which country?

(A) Pakistan (B) China

(C) Bangladesh (D) Nepal

ಭಾರತವು ಯಾವ ದೇಶದೊಂದಿಗೆ ತನ್ನ ಅತಿ ಉದ್ದದ ಅಂತರಾಷ್ಟ್ರೀಯ ಗಡಿಯನ್ನು ಹಂಚಿಕೊಳ್ಳುತ್ತದೆ?

(A) ಪಾಕಿಸ್ತಾನ (B) ಚೀನಾ

(C) ಬಾಂಗ್ಲಾದೇಶ (D) ನೇಪಾಳ

**40)** Which group of islands is located to the southwest of India in the Arabian Sea?

(A) Andaman and Nicobar Islands (B) Lakshadweep Islands

(C) Maldives (D) Sri Lanka

ದೇಶದ ಅರೇಬಿಯನ್ ಸಮುದ್ರದ ಕಡೆಯಲ್ಲಿರುವ ದ್ವೀಪಗಳ ಗುಂಪು ಯಾವುದು?

(A) ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು

(B) ಲಕ್ಷದ್ವೀಪ ದ್ವೀಪಗಳು

(C) ಮಾಲ್ದೀವ್ಸ್

(D) ಶ್ರೀಲಂಕಾ

**41)** The Indian monsoon is primarily driven by which of the following factors?

(A) Ocean currents

(B) Earth's rotation

(C) Differential heating of land and sea

(D) Magnetic forces from Earth's core

ಭಾರತದ ಮಾನ್ಸೂನ್ ಮಾರುತವು ಪ್ರಾಥಮಿಕವಾಗಿ ಯಾವ ವಿಚಾರಗಳಿಂದ ಚಾಲಿತವಾಗಿದೆ?

(A) ಮಹಾಸಾಗರ ಪ್ರವಾಹಗಳು

(B) ಭೂಮಿಯ ಸುತ್ತು

(C) ಭೂಮಿ ಮತ್ತು ಸಮುದ್ರದ ವಿಭಿನ್ನ ಉಷ್ಣಾಂಶದ ಹೀರುವಿಕೆ

(D) ಭೂಮಿಯ ಗರ್ಭದ ಚುಂಬಕ ಶಕ್ತಿಗಳು

**42)** Which river is the main tributary of the Ganga River?

(A) Yamuna (B) Narmada

(C) Tapi (D) Godavari

ಗಂಗಾ ನದಿಯ ಮುಖ್ಯ ಉಪನದಿ ಯಾವುದು?

(A) ಯಮುನಾ (B) ನರ್ಮದಾ

(C) ತಾಪಿ (D) ಗೋದಾವರಿ

**43)** Which soil type is rich in iron and aluminum and is typically found in the Western Ghats and parts of Orissa and Chhattisgarh?

(A) Black Soil (B) Laterite Soil

(C) Desert Soil (D) Mountain Soil

ಕಬ್ಬಿಣ ಮತ್ತು ಅಲ್ಯೂಮಿನಿಯಮ್ ಹೆಚ್ಚಾಗಿ ಹೊಂದಿರುವ ಮತ್ತು ಸಾಮಾನ್ಯವಾಗಿ ಪಶ್ಚಿಮ ಘಟ್ಟ ಮತ್ತು ಒರಿಸ್ಸಾ ಮತ್ತು ಛತ್ತೀಸ್‌ಗಢದ ಭಾಗಗಳಲ್ಲಿ ಕಂಡುಬರುವ ಮಣ್ಣಿನ ವಿಧ?

(A) ಕಪ್ಪು ಮಣ್ಣು (B) ಲ್ಯಾಟರೈಟ್ ಮಣ್ಣು

(C) ಮರುಭೂಮಿ ಮಣ್ಣು (D) ಪರ್ವತ ಮಣ್ಣು

**44)** The Bhakra Nangal Project is primarily associated with which two rivers?

(A) Yamuna and Sutlej (B) Beas and Ravi

(C) Sutlej and Beas (D) Ganga and Yamuna

ಭಾಕ್ರಾ ನಾಂಗಲ್ ಯೋಜನೆ ಯಾವ ಎರಡು ನದಿಗಳೊಂದಿಗೆ ಪ್ರಾಥಮಿಕವಾಗಿ ಸಂಪರ್ಕಿತವಾಗಿದೆ?

(A) ಯಮುನಾ ಮತ್ತು ಸಟ್ಲೇಜ್ (B) ಬಿಯಾಸ್ ಮತ್ತು ರವಿ

(C) ಸಟ್ಲೇಜ್ ಮತ್ತು ಬಿಯಾಸ್ (D) ಗಂಗಾ ಮತ್ತು ಯಮುನಾ

**45)** The Chota Nagpur Plateau is known for its concentration of which type of industries?

(A) Textile Industries (B) Agro-based Industries

(C) Heavy Industries (D) IT Industries

ಚೋಟಾ ನಾಗ್ಪುರ್ ಪೀಠಭೂಮಿ ಯಾವ ರೀತಿಯ ಕೈಗಾರಿಕೆಗಳ ಸಾಂದ್ರತೆಗಾಗಿ ಪರಿಚಿತವಾಗಿದೆ?

(A) ಜವಳಿ ಕೈಗಾರಿಕೆಗಳು (B) ಕೃಷಿ ಆಧಾರಿತ ಕೈಗಾರಿಕೆಗಳು

(C) ಭಾರಿ ಕೈಗಾರಿಕೆಗಳು (D) ಐಟಿ ಕೈಗಾರಿಕೆಗಳು

**46)** Which major latitude line passes through Karnataka?

(A) Tropic of Cancer (B) Equator

(C) Tropic of Capricorn (D) None of the above

ಕರ್ನಾಟಕದ ಮೂಲಕ ಯಾವ ಪ್ರಮುಖ ಅಕ್ಷಾಂಶ ರೇಖೆ ಹಾದು ಹೋಗುತ್ತದೆ?

(A) ಕರ್ಕಾಟಕ ಸಂಕ್ರಾಂತಿ ವೃತ್ತ (B) ಭೂಮಧ್ಯ ರೇಖೆ

(C) ಮಕರ ಸಂಕ್ರಾಂತಿ ವೃತ್ತ (D) ಮೇಲಿನವು ಯಾವುದೂ ಅಲ್ಲ

**47)** Which is the largest irrigation project in Karnataka?

(A) Upper Krishna Project (B) Tungabhadra Project

(C) Hemavathi Project (D) Almatti Dam

ಕರ್ನಾಟಕದ ಅತಿದೊಡ್ಡ ನೀರಾವರಿ ಯೋಜನೆ ಯಾವುದು?

(A) ಕೃಷ್ಣಾ ಮೇಲ್ದಂಡೆ ಯೋಜನೆ (B) ತುಂಗಭದ್ರಾ ಯೋಜನೆ

(C) ಹೇಮಾವತಿ ಯೋಜನೆ (D) ಆಲಮಟ್ಟಿ ಅಣೆಕಟ್ಟು

**48)** Which national park in Karnataka is famous for its tiger reserve?

(A) Bandipur National Park

(B) Bannerghatta National Park

(C) Anshi National Park

(D) Rajiv Gandhi National Park (Nagarhole)

ಕರ್ನಾಟಕದಲ್ಲಿ ಯಾವ ರಾಷ್ಟ್ರೀಯ ಉದ್ಯಾನವನ್ನು ಹುಲಿಗಳ ಸಂರಕ್ಷಣೆಗಾಗಿ ಪ್ರಸಿದ್ಧವಾಗಿದೆ?

(A) ಬಂಡೀಪುರ ರಾಷ್ಟ್ರೀಯ ಉದ್ಯಾನವನ

(B) ಬನ್ನೇರುಘಟ್ಟಾ ರಾಷ್ಟ್ರೀಯ ಉದ್ಯಾನವನ

(C) ಅಂಶಿ ರಾಷ್ಟ್ರೀಯ ಉದ್ಯಾನವನ

(D) ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ (ನಾಗರಹೊಳೆ)

**49)** What does the contour interval on a topographical map represent?

(A) The horizontal distance between contour lines

(B) The vertical distance between contour lines

(C) The depth of water bodies

(D) The elevation of the highest peak

ಭೂಸಾದೃಶ್ಯ ನಕ್ಷೆಯಲ್ಲಿ ಸಮೋನ್ನತ ರೇಖೆಗಳ ಅಂತರ ಏನನ್ನು ಪ್ರತಿನಿಧಿಸುತ್ತದೆ?

(A) ಸಮೋನ್ನತ ರೇಖೆಗಳ ನಡುವಿನ ಸಮತಲ ಅಂತರ

(B) ಸಮೋನ್ನತ ರೇಖೆಗಳ ಊರ್ಧ್ವಮುಖ ಅಂತರ

(C) ಜಲಭಾಗಗಳ ಆಳ

(D) ಉನ್ನತ ಶಿಖರದ ಎತ್ತರ

**50)** Which type of topographical map scale uses a ratio to represent the relationship between map distance and ground distance?

(A) Verbal scale (B) Graphic scale

(C) Fractional scale (D) None of the above

ಭೂಸಾದೃಶ್ಯ ನಕ್ಷೆಯಲ್ಲಿ ಯಾವ ಪ್ರಮಾಣ ಮಾಪಕವು ನಕ್ಷೆಯ ಅಂತರವನ್ನು ಮತ್ತು ನೆಲದ ಅಂತರವನ್ನು ಪ್ರತಿನಿಧಿಸಲು ಅನುಪಾತವನ್ನು ಬಳಸುತ್ತದೆ?

(A) ಮೌಖಿಕ ಮಾಪಕ (B) ರೇಖಾ ಮಾಪಕ

(C) ಪ್ರಾತಿನಿಧಿಕ ಭಿನ್ನಾಂಶ ಮಾಪಕ (D) ಮೇಲಿನವು ಯಾವುದೂ ಅಲ್ಲ

**ROUGH WORK**

## ಅಭ್ಯರ್ಥಿಗಳಿಗೆ ಸೂಚನೆಗಳು

1. ಓ.ಎಂ.ಆರ್. ಉತ್ತರ ಹಾಳೆಯ ಜೊತೆಗೆ 50 ಪ್ರಶ್ನೆಗಳನ್ನು ಹೊಂದಿರುವ ಮೊಹರು ಮಾಡಿದ ಪ್ರಶ್ನೆ ಪುಸ್ತಕವನ್ನು ನಿಮಗೆ ನೀಡಲಾಗಿದೆ.
2. ಕೊಟ್ಟಿರುವ ಪ್ರಶ್ನೆ ಪುಸ್ತಕವು, ನೀವು ಪರೀಕ್ಷೆಗೆ ಆಯ್ಕೆ ಮಾಡಿಕೊಂಡಿರುವ ವಿಷಯಕ್ಕೆ ಸಂಬಂಧಿಸಿದ್ದೇ ಎಂಬುದನ್ನು ಪರಿಶೀಲಿಸಿರಿ.
3. ಪ್ರಶ್ನೆ ಪತ್ರಿಕೆಯ ಮೊಹರನ್ನು ಜಾಗ್ರತೆಯಿಂದ ತೆರೆಯಿರಿ ಮತ್ತು ಪ್ರಶ್ನೆಪತ್ರಿಕೆಯಿಂದ ಓ.ಎಂ.ಆರ್. ಉತ್ತರ ಹಾಳೆಯನ್ನು ಹೊರಗೆ ತೆಗೆದು, ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಸಾಮಾನ್ಯ ಮಾಹಿತಿಯನ್ನು ತುಂಬಿರಿ. ಕೊಟ್ಟಿರುವ ಸೂಚನೆಯಂತೆ ನೀವು ನಮೂನೆಯಲ್ಲಿನ ವಿವರಗಳನ್ನು ತುಂಬಲು ವಿಫಲರಾದರೆ, ನಿಮ್ಮ ಉತ್ತರ ಹಾಳೆಯ ಮೌಲ್ಯಮಾಪನ ಸಮಯದಲ್ಲಿ ಉಂಟಾಗುವ ಪರಿಣಾಮಗಳಿಗೆ ವೈಯಕ್ತಿಕವಾಗಿ ನೀವೇ ಜವಾಬ್ದಾರರಾಗಿರುತ್ತೀರಿ.
4. ಪರೀಕ್ಷೆಯ ಸಮಯದಲ್ಲಿ:
   a) ಪ್ರತಿಯೊಂದು ಪ್ರಶ್ನೆಯನ್ನು ಜಾಗ್ರತೆಯಿಂದ ಓದಿರಿ.
   b) ಪ್ರತಿ ಪ್ರಶ್ನೆಯ ಕೆಳಗೆ ನೀಡಿರುವ ನಾಲ್ಕು ಲಭ್ಯ ಆಯ್ಕೆಗಳಲ್ಲಿ ಅತ್ಯಂತ ಸರಿಯಾದ/ ಸೂಕ್ತವಾದ ಉತ್ತರವನ್ನು ನಿರ್ಧರಿಸಿ.
   c) ಓ.ಎಂ.ಆರ್. ಹಾಳೆಯಲ್ಲಿನ ಸಂಬಂಧಿಸಿದ ಪ್ರಶ್ನೆಯ ವೃತ್ತಾಕಾರವನ್ನು ಸಂಪೂರ್ಣವಾಗಿ ತುಂಬಿರಿ. ಉದಾಹರಣೆಗೆ, ಪ್ರಶ್ನೆ ಪತ್ರಿಕೆಯಲ್ಲಿ ಪ್ರಶ್ನೆ ಸಂಖ್ಯೆ 8ಕ್ಕೆ "C" ಸರಿಯಾದ ಉತ್ತರವಾಗಿದ್ದರೆ, ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ಬಳಸಿ ಓ.ಎಂ.ಆರ್. ಉತ್ತರ ಹಾಳೆಯ ಕ್ರಮ ಸಂಖ್ಯೆ 8ರ ಮುಂದೆ ಈ ಕೆಳಗಿನಂತೆ ತುಂಬಿರಿ:

   ಪ್ರಶ್ನೆ ಸಂಖ್ಯೆ 8. Ⓐ Ⓑ ● Ⓓ (ಉದಾಹರಣೆ ಮಾತ್ರ) (ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸಿ)
5. ಉತ್ತರದ ಪೂರ್ವಸಿದ್ಧತೆಯ ಬರವಣಿಗೆಯನ್ನು (ಚಿತ್ತು ಕೆಲಸ) ಪ್ರಶ್ನೆ ಪತ್ರಿಕೆಯಲ್ಲಿ ಒದಗಿಸಿದ ಖಾಲಿ ಜಾಗದಲ್ಲಿ ಮಾತ್ರವೇ ಮಾಡಬೇಕು (ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮಾಡಬಾರದು).
6. ಒಂದು ನಿರ್ದಿಷ್ಟ ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ವೃತ್ತಾಕಾರವನ್ನು ಗುರುತಿಸಲಾಗಿದ್ದರೆ, ಅಂತಹ ಉತ್ತರವನ್ನು ತಪ್ಪು ಎಂದು ಪರಿಗಣಿಸಲಾಗುತ್ತದೆ ಮತ್ತು ಯಾವುದೇ ಅಂಕವನ್ನು ನೀಡಲಾಗುವುದಿಲ್ಲ. ಓ.ಎಂ.ಆರ್. ಹಾಳೆಯಲ್ಲಿನ ಉದಾಹರಣೆ ನೋಡಿ.
7. ಅಭ್ಯರ್ಥಿ ಮತ್ತು ಕೊಠಡಿ ಮೇಲ್ವಿಚಾರಕರು ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಓ.ಎಂ.ಆರ್. ಹಾಳೆಯ ಮೇಲೆ ಸಹಿ ಮಾಡಬೇಕು.
8. ಅಭ್ಯರ್ಥಿಯು ಪರೀಕ್ಷೆಯ ನಂತರ ಕೊಠಡಿ ಮೇಲ್ವಿಚಾರಕರಿಗೆ ಮೂಲ ಓ.ಎಂ.ಆರ್. ಉತ್ತರ ಹಾಳೆ ಮತ್ತು ವಿಶ್ವವಿದ್ಯಾನಿಲಯದ ಪ್ರತಿಯನ್ನು ಹಿಂದಿರುಗಿಸಬೇಕು.
9. ಅಭ್ಯರ್ಥಿಯು ಪ್ರಶ್ನೆ ಪುಸ್ತಕವನ್ನು ಮತ್ತು ಓ.ಎಂ.ಆರ್. ಅಭ್ಯರ್ಥಿಯ ಪ್ರತಿಯನ್ನು ತಮ್ಮ ಜೊತೆ ತೆಗೆದುಕೊಂಡು ಹೋಗಬಹುದು.
10. ಕ್ಯಾಲ್ಕುಲೇಟರ್, ಪೇಜರ್ ಮತ್ತು ಮೊಬೈಲ್ ಫೋನ್‌ಗಳನ್ನು ಪರೀಕ್ಷಾ ಕೊಠಡಿಯ ಒಳಗೆ ಅನುಮತಿಸಲಾಗುವುದಿಲ್ಲ.
11. ಅಭ್ಯರ್ಥಿಯು ದುಷ್ಕೃತ್ಯದಲ್ಲಿ ತೊಡಗಿರುವುದು ಕಂಡುಬಂದರೆ, ಅಂತಹ ಅಭ್ಯರ್ಥಿಯನ್ನು ಕೋರ್ಸ್‌ಗೆ ಪರಿಗಣಿಸಲಾಗುವುದಿಲ್ಲ ಮತ್ತು ನಿಯಮಗಳ ಪ್ರಕಾರ ಅಂತಹ ಅಭ್ಯರ್ಥಿಯ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.
12. ಈ ಪ್ರವೇಶ ಪರೀಕ್ಷೆಯಲ್ಲಿ ಅರ್ಹರಾಗಲು ಒಟ್ಟು 50 ಅಂಕಗಳಲ್ಲಿ SC/ST/Cat-I ಅಭ್ಯರ್ಥಿಗಳು ಕನಿಷ್ಠ 8 ಅಂಕಗಳನ್ನು, OBC ಅಭ್ಯರ್ಥಿಗಳು ಕನಿಷ್ಠ 9 ಅಂಕಗಳನ್ನು ಮತ್ತು ಇನ್ನಿತರ ಅಭ್ಯರ್ಥಿಗಳು ಕನಿಷ್ಠ 10 ಅಂಕಗಳನ್ನು ಪಡೆಯತಕ್ಕದ್ದು.

## ಓ.ಎಂ.ಆರ್. ಹಾಳೆಯನ್ನು ತುಂಬಲು ಸೂಚನೆಗಳು

1. ಪ್ರತಿಯೊಂದು ಪ್ರಶ್ನೆಗೆ ಒಂದೇ ಒಂದು ಅತ್ಯಂತ ಸೂಕ್ತವಾದ/ಸರಿಯಾದ ಉತ್ತರವಿರುತ್ತದೆ.
2. ಪ್ರತಿ ಪ್ರಶ್ನೆಗೆ ಒಂದು ವೃತ್ತವನ್ನು ಮಾತ್ರ ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಪೆನ್‌ನಿಂದ ಮಾತ್ರ ತುಂಬತಕ್ಕದ್ದು. ಉತ್ತರವನ್ನು ಮಾರ್ಪಡಿಸಲು ಪ್ರಯತ್ನಿಸಬೇಡಿ.
3. ವೃತ್ತದೊಳಗಿರುವ ಅಕ್ಷರವು ಕಾಣದಿರುವಂತೆ ವೃತ್ತವನ್ನು ಸಂಪೂರ್ಣವಾಗಿ ತುಂಬುವುದು.
4. ಓ.ಎಂ.ಆರ್. ಹಾಳೆಯಲ್ಲಿ ಯಾವುದೇ ಅನಾವಶ್ಯಕ ಗುರುತುಗಳನ್ನು ಮಾಡಬೇಡಿ.
5. ಉತ್ತರಿಸಿದ ಪ್ರಶ್ನೆಗಳ ಒಟ್ಟು ಸಂಖ್ಯೆಯನ್ನು O.M.R. ಹಾಳೆಯಲ್ಲಿ ನಿಗದಿಪಡಿಸಿರುವ ಜಾಗದಲ್ಲಿ ನಮೂದಿಸತಕ್ಕದ್ದು, ಇಲ್ಲವಾದಲ್ಲಿ O.M.R. ಹಾಳೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

**Note** : English version of the instructions is printed on the front cover of this booklet.